ವಿದ್ಯೆಯೂ ಅವನಿಗೆ ದೊರೆತಿದೆ. ನೀನು ತಾಳ್ಮೆ ವಹಿಸಿ ಕಾದರೆ ಸ್ವಲ್ಪ ಕಾಲದಲ್ಲಿ ಶುಭವಾರ್ತೆ ನಿನ್ನ ಮಗನಿಂದ ಬರಬಹುದು' ಎಂದು ನುಡಿದರು. ಅವರ ಮಾತಿನಿಂದ ಗಂಗಪ್ಪನ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಯಿತು.

ಇತ್ತ ತಂದೆಯ ಮೇಲೆ ಕೋಪಗೊಂಡು ಮನೆಯನ್ನು ಬಿಟ್ಟು ಹೊರಟ ಚಂದ್ರಪ್ಪನು ಎತ್ತೆತ್ತಲೋ ತಿರುಗಿದ. ಗೊತ್ತು ಗುರಿಯಿಲ್ಲದೆ ಮನಬಂದಂತೆ ಸಾಗಿದ ದಾರಿಯಲ್ಲಿ ಅವನಿಗೆ ಹಲವಾರು ರೀತಿಯ ಅನುಭವಗಳಾದುವು. ಲೋಕ ಸಂಚಾರದಲ್ಲಿ ಆದ ಅನುಭವಗಳಿಂದ ಅವನ ಮೊಂಡುತನ, ದುಡುಕು ಬುದ್ಧಿಗಳು ಬದಲಾದವು. ಅವನ ಮನಸ್ಸು ಮಾಗಿತು. ಅವನು ಯೋಗಾನಂದರೆಂಬ ಗುರುಗಳ ಆಶ್ರಯದಲ್ಲಿ ನೆಲೆನಿಂತನು. ಆ ಗುರುವು ಅವನಿಗೆ ಅಕ್ಷರ ವಿದ್ಯೆಯ ಜೊತೆಗೆ ಶಸ್ತ್ರವಿದ್ಯೆಯನ್ನೂ ಹೇಳಿಕೊಟ್ಟರು. ಚಂದ್ರಪ್ಪನು ಶಸ್ತ್ರವಿದ್ಯೆ ಮತ್ತು ಅಕ್ಷರ ವಿದ್ಯೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದನು. ನಂತರ ಯೋಗಾನಂದ ಗುರುಗಳು ಅವನನ್ನು ರಾಜಧಾನಿಗೆ ಕಳಿಸಿದರು.

ಚಂದ್ರಪ್ಪನು ನಗರಕ್ಕೆ ಬಂದಾಗ ಅಲ್ಲೊಂದು ಘಟನೆಯು ನಡೆದಿತ್ತು. ಅಲ್ಲಿಯ ರಾಜನು ಮರಣಿಸಿದ. ಅವನಿಗೆ ಯಾರೂ ಮಕ್ಕಳು ಇರಲಿಲ್ಲ. ಆದ್ದರಿಂದ ರಾಜನ ಸಿಂಹಾಸನ ತೆರವಾಗಿತ್ತು. ರಾಜ್ಯದ ಮಂತ್ರಿಗಳು ರಾಜನನ್ನು ಆಯ್ಕೆ ಮಾಡಲು ಪಟ್ಟದಾನೆಯ ಕೈಗೆ ಮಾಲೆಯನ್ನು ಕೊಟ್ಟು ನಗರದಲ್ಲಿ ಬಿಟ್ಟಿದ್ದರು. ಚಂದ್ರಪ್ಪನು ನಗರಕ್ಕೆ ಬಂದಾಗ ಪಟ್ಟದಾನೆಯು ನೇರವಾಗಿ ಬಂದು ಅವನ ಕೊರಳಿಗೆ ಮಾಲೆಯನ್ನು ಹಾಕಿಬಿಟ್ಟಿತು! ಅಲ್ಲಿ ನೆರೆದವರೆಲ್ಲ 'ಮಹಾರಾಜರಿಗೆ ಜಯವಾಗಲಿ!' ಎಂದು ಜೈಕಾರ ಹಾಕಿದರು. ಮಂತ್ರಿಗಳು ಚಂದ್ರಪ್ಪನನ್ನು ಅರಮನೆಗೆ ಕರೆದೊಯ್ದರು. ರಾಜಗುರುಗಳನ್ನು ಕೇಳಿ ಪಟ್ಟಾಭಿಷೇಕ ಮಾಡಲು ಶುಭದಿನವೊಂದನ್ನು ಗೊತ್ತುಪಡಿಸಿದರು.

ಇತ್ತ ಗಂಗಪ್ಪನು ಜೋಯಿಸರ ಮಾತಿನಂತೆ ಶುಭವಾರ್ತೆಯನ್ನು ನಿರೀಕ್ಷಿಸಿಕೊಂಡಿದ್ದ. ಸ್ವಲ್ಪ ಕಾಲದಲ್ಲಿಯೇ ಕಳಿಂಗ ದೇಶದ ಮಂತ್ರಿಗಳು ಗಂಗಪ್ಪನ ಮನೆಯನ್ನು ಹುಡುಕಿಕೊಂಡು ಬಂದರು. ಚಂದ್ರಪ್ಪನು ತನ್ನವರನ್ನು ಕರೆತರಲು ರಥಗಳನ್ನು ಕಳಿಸಿಕೊಟ್ಟಿದ್ದ. ಗಂಗಪ್ಪನು ಜೋಯಿಸರನ್ನೂ, ತನ್ನ ಆಪ್ತರನ್ನೂ ಕರೆದುಕೊಂಡು ಕಳಿಂಗ ದೇಶಕ್ಕೆ ಹೋದನು. ನಂತರ ಶುಭ ಮುಹೂರ್ತದಲ್ಲಿ ಚಂದ್ರಪ್ಪನ ಪಟ್ಟಾಭಿಷೇಕವು ಮಹಾ ವೈಭವದಿಂದ ನಡೆಯಿತು ಚಂದ್ರಪ್ಪನು 'ಚಂದ್ರಪ್ಪ ನಾಯಕ'ನೆಂಬ ಹೆಸರಿನಿಂದ ಸಿಂಹಾಸನವನ್ನು ಏರಿದನು. ಒಂದು ತಿಂಗಳವರೆಗೆ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆದವು. ನಂತರ ಅವಂತಿನಗರದ ರಾಜನು ತನ್ನ ಪುತ್ರಿಯನ್ನು ಚಂದ್ರಪ್ಪ ನಾಯಕನಿಗೆ ಮದುವೆ ಮಾಡಿಕೊಟ್ಟನು. ಚಂದ್ರಪ್ಪ ನಾಯಕನು ಅನೇಕ ವರ್ಷಗಳವರೆಗೆ ರಾಜನಾಗಿ ಸುಖವಾಗಿ ಬಾಳಿದನು. ಹೀಗೆ ಬಡವ ಗಂಗಪ್ಪನ ಮಗನು ತನ್ನ ಸ್ವಸಾಮರ್ಥ್ಯದಿಂದಲೂ ಅದೃಷ್ಟದ ಬಲದಿಂದಲೂ ರಾಜನಾಗಿ ಬಾಳಿದ್ದನ್ನು ಅನೇಕ ವರ್ಷಗಳ ಕಾಲ ಪ್ರಜೆಗಳು ಮಾತನಾಡಿಕೊಳ್ಳುತ್ತಿದ್ದರು!

**-ಶಿವಮೊಗ್ಗ ಗೀತಾ ಶಾಸ್ತ್ರಿ,**
**ಬೆಂಗಳೂರು**

# ನನಸಾದ ಕನಸು



ಅನೇಕ ವರ್ಷಗಳ ಹಿಂದೆ, ಹಳ್ಳಿಯೊಂದರಲ್ಲಿ ಶಂಕರ ಎಂಬ ಬಡ ಯುವಕನಿದ್ದನು. ಆತನಿಗೆ ಒಂದು ದಿನ ಕನಸಿನಲ್ಲಿ ಒಬ್ಬ ಮುನಿ ಕಾಣಿಸಿಕೊಂಡು, 'ನೀನು ನಾಳೆ ಸಂಜೆ ಊರಾಚೆ ಇರುವ ಸೇತುವೆ ಬಳಿ ಹೋದರೆ ಶ್ರೀಮಂತನಾಗುತ್ತೀಯೇ' ಎಂದು ಹೇಳಿದಂತಾಯಿತು.

ಆ ಕನಸನ್ನು ನಂಬಿದ ಶಂಕರ, ಮಾರನೆಯ ದಿನ ಕತ್ತಲೆ ಆವರಿಸುತ್ತಿದ್ದಂತೆ ಆ ಸೇತುವೆ ಬಳಿಗೆ ಹೋಗಿ ನಿಂತುಕೊಂಡನು. ಒಂದೆರಡು ಗಂಟೆ ಕಳೆದಿರಬೇಕು, ಅಷ್ಟರಲ್ಲಿ ಅದೇ ಊರಿನ ಶ್ರೀಮಂತ ವ್ಯಾಪಾರಿ ಶ್ರೀನಿವಾಸ ಶೆಟ್ಟರು ವಾಯು ವಿಹಾರಕ್ಕೆಂದು ಅಲ್ಲಿಗೆ ಬಂದರು. ಅಷ್ಟೊಂದು ಗಾಡಾಂಧಕಾರದಲ್ಲಿ ಶಂಕರನು ಒಬ್ಬನೇ ಅಲ್ಲಿ ನಿಂತಿರುವುದು ಅವರಿಗೆ ಸೋಜಿಗವೆನಿಸಿತು. ಶಂಕರನನ್ನು ಸಮೀಪಿಸಿದ ಶೆಟ್ಟರು, 'ಏನ್ ತಮ್ಮಾ, ಇಲ್ಲಿ ಅಷ್ಟೊತ್ತಿನಿಂದ ಏನು ಮಾಡುತ್ತಿದ್ದೀಯೆ?' ಎಂದು ಪ್ರಶ್ನಿಸಿದರು. ಅದಕ್ಕೆ ಶಂಕರ, ತಾನು ನಿನ್ನೆ ಕಂಡ ಕನಸನ್ನು ತಿಳಿಸಿ, ಅದರ ಪರೀಕ್ಷೆಗೋಸ್ಕರ ಬಂದಿರುವುದಾಗಿ ಹೇಳಿದ. 'ಶೆಟ್ಟರೆ ನನ್ನ ಕನಸು ಖಂಡಿತ ನಿಜವಾಗುತ್ತೆ. ನಾನು ಶ್ರೀಮಂತನಾಗಿಯೇ ತೀರುತ್ತೇನೆ' ಎಂದ.

ಅದಕ್ಕೆ ಶೆಟ್ಟರು 'ಅಯ್ಯೋ ಹುಚ್ಚು ಹುಡುಗಾ! ಕನಸು ಎಲ್ಲಾದರೂ ನಿಜವಾಗುತ್ತೇನೊ? ಅದು ನಮ್ಮ ಮನಸ್ಸಿನ ಭ್ರಮೆ ಅಷ್ಟೆ' ಎಂದರು ಮತ್ತು ಅವರು ತಮ್ಮ ಮಾತನ್ನು ಮುಂದುವರೆಸಿ 'ಈಗ ನನ್ನನ್ನೇ ತೆಗೆದುಕೊ, ನನಗೂ ಕನಸು ಬಿದ್ದಿದೆ. ಆ ದೊಡ್ಡ ಆಲದ ಮರದ ಕೆಳಗೆ ನಿಧಿ ಹುಗಿದಿದೇಂತ. ಅಲ್ಲಿ ಚಿನ್ನದ ನಾಣ್ಯಗಳು ತುಂಬಿರುವ ಕೊಡವಿದೆ ಎಂದು ನಾನು ಕನಸಿನಲ್ಲಿ ಕಂಡಿದ್ದೇನೆ. ಆದರೆ ಅದೆಲ್ಲ ಸುಳ್ಳು. ನಮ್ಮ ಮನಸ್ಸಿನ ಹುಚ್ಚು ಕಲ್ಪನೆ ಮಾತ್ರ' ಎನ್ನುತ್ತಾ ಎದುರಿಗೆ ಕಾಣುತ್ತಿದ್ದ ದೊಡ್ಡ ಆಲದ ಮರವನ್ನು ಬೊಟ್ಟು ಮಾಡಿ ತೋರಿಸಿದರು. ಆ ಮೇಲೆ ಶೆಟ್ಟರು ಅಲ್ಲಿಂದ ಹೊರಟು ಹೋದರು.

ನಂತರ ಶಂಕರನಿಗೆ ಏನನ್ನಿಸಿತೋ ಏನೊ ಕೂಡಲೆ ಆತ ಹಾರೆ, ಸಲಿಕೆ ತಂದು ಆಲದ ಮರದ ಬುಡ ಅಗೆಯತೊಡಗಿದೆ. ಸ್ವಲ್ಪ ಹೊತ್ತಿನಲ್ಲೆ 'ಠಣ್' ಎಂದು ಶಬ್ದವಾಯಿತು. ಅದೊಂದು ತಾಮ್ರದ ಬಿಂದಿಗೆಯಾಗಿತ್ತು. ಅದರ ತುಂಬಾ ಚಿನ್ನದ ನಾಣ್ಯಗಳಿದ್ದವು. ಶ್ರೀನಿವಾಸ ಶೆಟ್ಟರ ಮೂರ್ಖತನಕ್ಕೆ ನಕ್ಕು ಶಂಕರ ವಿಜಯೋತ್ಸಾಹದಿಂದ ಆ ರಾತ್ರೆ ಬಿಂದಿಗೆಯನ್ನು ತನ್ನ ಮನೆಗೆ ಸಾಗಿಸಿದ. ಆ ಶೆಟ್ಟರು ಪ್ರಯತ್ನಿಸಿದ್ದರೆ ಆ ನಿಧಿ ಅವರಿಗೇ ದೊರೆತು ಅವರು ಮತ್ತಷ್ಟು ಶ್ರೀಮಂತರಾಗುತ್ತಿದ್ದರು ಎಂದುಕೊಂಡ ಶಂಕರ, ತನ್ನ ಪ್ರಯತ್ನದ ಫಲವಾಗಿ ತಾನು ಕಂಡ ಕನಸನ್ನು ನನಸಾಗಿಸಿಕೊಂಡನು. ಆ ಮೇಲೆ ಆತನೂ ಶ್ರೀಮಂತನೆನಿಸಿಕೊಂಡು ಸುಖವಾಗಿದ್ದನು.

**-ಜಿ.ಬಸವರಾಜಪ್ಪ,**
**ಮೈಸೂರು**